ಅತ್ತೆಯ ಸಲಹೆಯಂತೆ ಮೂರುಚಕ್ರದ ಸೈಕಲ್ ತಂದುಕೊಟ್ಟಮೇಲಂತೂ ಅದೇ ಅವನ ಪ್ರಪಂಚ. ಚಪ್ಪರದ ಕೆಳಗಿನ ತಣ್ಣೆಳಲಲ್ಲಿ ಸೈಕಲ್ ಹೊಡೆಯುತ್ತಾ ಮೈಮರೆತುಬಿಡುತ್ತಾನೆ. ಅತ್ತೆ ಬೈದು, ಭಂಗಿಸಿ, ಚಾಳಿಸಿ ಓದಿಸಿದ್ದರಿಂದ ಇಂತಾ ದಿನಗಳನ್ನು ಕಾಣಲು ಸಾಧ್ಯವಾಯಿತು ಎಂದು ಛಾಯಾ ಅವರ ಬಗ್ಗೆ ಸದ್ಭಾವನೆ ಹೊಂದಿದ್ದರೆ ಅತ್ತೆಯ ಹುನ್ನಾರ ಬೇರೆಯೇ ಇತ್ತೆಂದು ಅರಿವಾಗಿ ಬೆಟ್ಟು ಕಚ್ಚಿಕೊಂಡಿದ್ದಳು ಛಾಯಾ.

***

ಛಾಯಾ ಕೆಲಸಕ್ಕೆ ಸೇರಿ ವರ್ಷ ಕಳೆಯುತ್ತಾ ಬಂದಿತ್ತು. ಬಸ್ಸಿಗೆ ಹೊರಡುವ ಮೊದಲು ಅತ್ತೆಗೆ ಕೈಲಾದಷ್ಟು ಸಹಾಯ ಮಾಡುತ್ತಾ, ಮಗನ ನಿಗಾ ವಹಿಸುತ್ತಾ, ತನ್ನ ಅಲ್ಪಾವಧಿಯ ವೈವಾಹಿಕ ಜೀವನ ಮರೆತೇ ಹೋಗಿದೆಯೆಂಬಂತೆ ಛಾಯಾ ಬಿಡುವಿಲ್ಲದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಳು. ಭಾನುವಾರ ಆವತ್ತು. ತಲೆಗೆ ಹರಳೆಣ್ಣೆ ಹಾಕಿಸಿಕೊಂಡು, ಮೈ ತುಂಬಾ ಎಣ್ಣೆ ಹಚ್ಚಿಸಿಕೊಂಡು ಅಂಗಳದಲ್ಲಿ ಕುಣಿಯುತ್ತಿದ್ದ ತನ್ನ ಮಗನ ಚೇಷ್ಟೆ ನೋಡುತ್ತಾ ಚಪ್ಪರದ ಕಲ್ಲುಕಂಬಕ್ಕೆ ವರಗಿ ನಿಂತಿದ್ದಳು ಛಾಯಾ. ಅತ್ತೆಯ ಸವಾರಿ ಹೊರಗೆ ಬಂದು ಮತ್ತೊಂದು ಕಂಬಕ್ಕೆ ವರಗಿ ನಿಂತುಕೊಂಡಿತು.

"ಅದೇನು ಕುಣಿತಾನೋ ಪುಣ್ಯಾತ್ಮ, ಶುದ್ಧ ಕಪಿ..." ಮೊಮ್ಮಗನನ್ನು ನೋಡುತ್ತ ಅತ್ತೆ ಉದ್ಗಾರ ತೆಗೆದರು.

ಹೂಂಗುಟ್ಟಿದಳು ಸೊಸೆ.

"ಸುಮಾರು ದಿನದಿಂದ ನಿಂಗೆ ಒಂದು ಮಾತು ಹೇಳ್ಬೇಕು ಅಂತಿದೀನಿ. ಇವತ್ತು ಮುಹೂರ್ತ ಕೂಡಿ ಬಂತೂಂತ ಕಾಣುತ್ತೆ..."

'ಹೇಳಿ ಅತ್ತೆ...' ಎನ್ನುವಂತೆ ಅವರ ಮುಖ ನೋಡಿದಳು ಛಾಯಾ.

"ನೀನು ಇನ್ನೊಂದು ಮದುವೆ ಮಾಡ್ಕಂಬೇಕು ಕಣೇ. ಇನ್ನೂ ಚಿಕ್ಕಪುಟ್ಗೋಳು. ಎಷ್ಟು ಕಾಲ ಹೀಗೇ ಸನ್ಯಾಸಿನಿ ಹಂಗಿರ್ತಿ?"

ಛಾಯಾ ಅದ್ಯಾವ ಪರಿ ಗಾಬರಿ ಬಿದ್ದಳು ಅಂದರೆ ಇಂತಾ ಮಾತು ಆಡುತ್ತಿರುವುದು ತನ್ನ ಅತ್ತೆ ಎನ್ನುವುದನ್ನು ನಂಬದವಳಂತೆ ಅವಳ ಕಣ್ಣುಗಳು ಅರಳಿಕೊಂಡಿದ್ದುವು.

"ಅದ್ಯಾಕೆ ಹಾಗೆ ಗರಬಡಿದೋಳ ಥರ ನೋಡ್ತಿದ್ದಿ? ನಂಗೆ ಇನ್ನೆಷ್ಟು ವರ್ಷ ಆಯುಷ್ಯ ಉಂಟೋ ಯಾರಿಗೆ ಗೊತ್ತುಂಟು? ಒಬ್ಬಂಟಿಯಾಗಿ ಬದುಕು ಮಾಡೋಕೆ ಸಾಧ್ಯಾನಾ ನಿಂಗೆ?"

"ನೀವಿರ್ಲಿಲ್ವಾ ಅತ್ತೆ? ನಂಗ್ಯಾಕೆ ಹದ ಹೇಳೋಕೆ ಬರ್ತಿದೀರಿ?"

"ಮುಗೀತಲ್ಲ ಆ ಕಾಲ. ನಿಮ್ಮ ಮಾವ ಹೋದಾಗ ನಿನ್ನ ಗಂಡಂಗೆ ಹತ್ತು ವರ್ಷ ಆಗಿತ್ತು ಕಣೇ. ತೀರಾ ನಿನ್ನಷ್ಟು ಅನ್ಯಾಯ ಆಗ್ಲಿಲ್ಲ ನಂಗೆ..."

"ನೀವು ಹಿಂಗಿದ್ದೆಲ್ಲಾ ಮಾತಾಡೋದಾದ್ರೆ ನನ್ನತ್ರ ಮಾತಾಡ್ಲೇಬೇಡಿ..." ನಿಜಕ್ಕೂ ಸಿಟ್ಟು ಬಂದಿತ್ತು ಛಾಯಾಗೆ. ಹೊರಪ್ರಪಂಚದ ಒಡನಾಟ ಅತ್ತೆಗೆ ಎದುರು ಹೇಳುವಷ್ಟು ಗಟ್ಟಿತನ ಕಲಿಸಿತ್ತು.

"ನೀನು ಓದಿದೋಳು. ಕೂತ್ಗಂಡು ನಿಧಾನಕ್ಕೆ ಯೋಚ್ನೆ ಮಾಡು. ಈ ಕಾಲದಲ್ಲಿ ಇದೆಲ್ಲಾ ಮಾಮೂಲು. ಯಾರಾದ್ರೂ ಪುಣ್ಯಾತ್ಮರು ಸಿಕ್ತಾರೆ..."

"ಅಷ್ಟು ಬೇಕೂಂತಾದ್ರೆ ನಾನೇ ಹುಡುಕ್ಕಂತೀನಿ. ನಿಮ್ಮ ಮಧ್ಯಸ್ಥಿಕೆ ಬೇಕಾಗಿಲ್ಲ."

"ಆಯ್ತು ಮಾರಾಯ್ತೀ, ಹುಡುಕ್ಕಾ. ಆದಷ್ಟು ಬೇಗ ಹುಡುಕ್ಕಾ. ನಂಗೊಂದು ತಲೆಭಾರ ಕಮ್ಮಿ ಆಗುತ್ತೆ..."

"ಅತ್ತೇ, ನಿಮಗೇನಾದ್ರೂ ಹುಚ್ಚು ಹಿಡಿದಿದ್ಯಾ? ಸೊಸೆಯಾದೋಳಿಗೆ ಇನ್ನೊಂದು ಮದುವೆ ಮಾಡ್ಕೋ ಅಂತ ಯಾರಾರೂ ಹೇಳ್ತಾರಾ?"

"ಹುಚ್ಚು ಹಿಡಿದಿದ್ದು ಇವಾಗಲ್ಲ, ಆವತ್ತೇ ಹಿಡಿದಿತ್ತು. 'ಓದು... ಓದು... ಅಂತ ನಿನ್ನ ಬೆನ್ನು ಹತ್ತಿದ್ದು ಯಾಕೇಂತ ಗೊತ್ತಾ? ನಿಂಗೊಂದು ಕೆಲಸಾಂತ ಇದ್ರೆ ಯಾರಾದ್ರೂ ನಿನ್ನ ಮದುವೆ ಮಾಡ್ಕಂತಾರೆ ಅಂತ. ಮತ್ತೆ ಏನಾದ್ರೂ ಹೆಚ್ಚುಕಮ್ಮಿ ಆದ್ರೆ ನೀನು ಕೈಕಾಲುಗೆಡೋದು ಬೇಡ ಅಂತ..."

"ಇಷ್ಟೆಲ್ಲಾ ಪ್ಲಾನು ಮಾಡ್ಕಂಡು ನನ್ನ ಓದೋಕೆ ಕಳಿಸಿದ್ರಾ? ಮೊದಲೇ ಗೊತ್ತಿದ್ದಿದ್ರೆ..."

"ಗೊತ್ತಿದ್ದಿದ್ರೆ ಏನ್ಮಾಡ್ತಿದ್ದಿ?"

"ಮನೆ ಬಿಟ್ಟು ಹೊರಗೆ ಕಾಲಿಡ್ತಿರ್ಲಿಲ್ಲ. ಏನ್ಮಾಡ್ತಿದ್ರಿ? ಹೊಡೀತಿದ್ರಾ? ಬಡೀತಿದ್ರಾ?"

"ಅಷ್ಟು ಸಲೀಸಾಗಿ ಲೆಕ್ಕ ಹಾಕ್ಬೇಡ. ಏನ್ಬೇಕಾದ್ರೂ